# ಮೈಸೂರು ಮಹಾನಗರ ಪಾಲಿಕೆ

ಜವಹರ್‌ಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ ಯೋಜನೆಯ ಸಭೆಯ ನಡವಳಿ, ಮೈಸೂರು.

ಸಭೆಯ ದಿನಾಂಕ : 16-12-2009.

ಸಭೆಯ ವೇಳೆ : ಬೆಳಿಗ್ಗೆ 9.00 ಕ್ಕೆ

ಅಧ್ಯಕ್ಷತೆ : ಜಿಲ್ಲಾಧಿಕಾರಿಗಳು ಮತ್ತು ನರ್ಮ್ ವಿಶೇಷಅಧಿಕಾರಿಗಳು,

| ಕ್ರ. ಸಂ. | ಹಾಜರಿದ್ದವರು | ಕ್ರ ಸಂ. | ಹಾಜರಿದ್ದವರು |
|---|---|---|---|
| 1. | ಶ್ರೀ ಕೆ.ಎಸ್. ರಾಯ್ಕರ್, ಆಯುಕ್ತರು, ಮೈನಪಾ | 19. | ಶ್ರೀ ಎಂ.ವಿ. ಶ್ರೀಧರ್, ಸಕಾಇಂ, ನರ್ಮ್ |
| 2. | ಶ್ರೀ ಜಯಣ್ಣ, ಆಯುಕ್ತರು, ಮೂಡಾ | 20. | ಶ್ರೀ ಹೆಚ್.ವಿ. ಶ್ರೀಧರ್‌ಮೂರ್ತಿ, ಸಕಾಇಂ, ನರ್ಮ್ |
| 3. | ಶ್ರೀ ಎಸ್.ಟಿ.ದೇವರಾಜು, ಉಪ ಆಯುಕ್ತರು, ಮೈನಪಾ | 21. | ಶ್ರೀ ಎಂ. ಬಸವರಾಜು, ಸಕಾಇಂ, ನರ್ಮ್ |
| 4. | ಶ್ರೀ ಬಿ.ಕೆ. ಸುರೇಶ್‌ಬಾಬು, ಅಇಂ, ನರ್ಮ್, ಮೈನಪಾ | 22. | ಶ್ರೀ ಎಂ.ಆರ್.ರಾಘವೇಂದ್ರ, ಸಕಾಇಂ, ನರ್ಮ್ |
| 5. | ಶ್ರೀ ಮಹೇಶ್, ಅಇಂ, ಮೈನಪಾ | 23. | ಶ್ರೀ ಹೆಚ್. ಕಿಶೋರ್‌ಚಂದ್ರ, ಸಕಾಇಂ, ಮೂಡಾ |
| 6. | ಶ್ರೀ ಶಿವಕುಮಾರ್, ಅಇಂ, ಮೂಡಾ | 24. | ಶ್ರೀ ರಾಧಕೃಷ್ಣ, ನಿರ್ದೇಶಕರು, ಎನ್‌ಸಿಸಿಎಲ್ |
| 7. | ಶ್ರೀ ಎಂ.ಎನ್. ಶ್ರೀನಿವಾಸ, ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕೆ.ಎಸ್.ಆರ್.ಟಿ.ಸಿ | 25. | ಶ್ರೀ ಆರ್.ವಿ. ರವಿ, ಹಿರಿಯ ಪ್ರಧಾನ ವ್ಯವಸ್ಥಾಪಕರು, ಎನ್‌ಸಿಸಿಎಲ್ |
| 8. | ಶ್ರೀ ಹೊನ್ನೇಗೌಡ, ಕಾಅ., ಕೆಯುಡಬ್ಲ್ಯೂಎಸ್ & ಡಿಬಿ | 26. | ಶ್ರೀ ಲಕ್ಷ್ಮಣ್, ಸಂಚಾಲಕರು, ಎಸಿಐಸಿಎಂ |
| 9. | ಶ್ರೀ ಡಿ. ಬಿಳಿಗಿರಿರಂಗಸ್ವಾಮಿ, ಕಾಅ, ಕೆ.ಎಸ್.ಸಿ.ಬಿ | 27. | ಶ್ರೀಮತಿ ಶೋಭಾಭಟ್, ಮಾನವ ಸಂಪನ್ಮೂಲ ಅಧಿಕಾರಿ, ನರ್ಮ್ |
| 10. | ಶ್ರೀ ಎಸ್.ಎ. ಚಂದ್ರಕಾಂತ್, ಕಾಅ, ನರ್ಮ್, ಮೈನಪಾ | 28. | ಶ್ರೀ ಶರತ್ ಹೆಚ್.ಎಸ್, ಐ.ಟಿ. ಆಫಿಸರ್, ಜೆಎನ್‌ನರ್ಮ್ |
| 11. | ಶ್ರೀಮತಿ ಸುಧಾ ಎಂ.ವಿ. ಯೋಜನಾ ನಿರ್ದೇಶಕರು, ಯುಡಿ ಸೆಲ್ | 29. | ಶ್ರೀ ಚಿದಂಬರ್ ಬಿ.ಎಸ್, ಪಿ.ಹೆಚ್.ಇ, ನರ್ಮ್ |
| 12. | ಶ್ರೀ ಬಿ.ಎಲ್. ಭೈರಪ್ಪ, ನಗರಪಾಲಿಕೆ ಸದಸ್ಯರು, ಮೈನಪಾ | 30. | ಶ್ರೀ ಡಿ.ಆರ್. ರಂಗೇಗೌಡ್, ಯೋಜನಾ ವ್ಯವಸ್ಥಾಪಕರು, ಎನ್‌ಸಿಸಿಎಲ್ |
| 13. | ಶ್ರೀ ರಾಮಚಂದ್ರಯ್ಯ, ಸಕಾಇಂ, ಕೆ.ಯು.ಡಬ್ಲ್ಯೂ.ಎಸ್ & ಡಿಬಿ | 31. | ಶ್ರೀ ಕಿರಣ್‌ಕುಮಾರ್, ಉಪ ಪ್ರಧಾನ ವ್ಯವಸ್ಥಾಪಕರು, ಎನ್‌ಸಿಸಿಎಲ್ |
| 14. | ಶ್ರೀ ಬಿ.ಸಿ. ಕುಮಾರ್, ಸಕಾಇಂ, ಕ.ರಾ.ರ.ಸಾ.ಸಂ | 32. | ಶ್ರೀ ಜಿ. ಶಿವಕುಮಾರ್, ಪಿಎಂ, ಮೆ॥ ಪ್ರತ್ಯೂಷ ಅಸೋಸಿಯೇಟ್ಸ್ |
| 15. | ಶ್ರೀ ಎ.ಎನ್.ಪ್ರಸಾದ್, ಸಕಾಇಂ, ಮೈನಪಾ | 33. | ಶ್ರೀ ಆರ್.ಪಿ. ಅಗರ್‌ವಾಲ, ಜಿ.ಎಂ., ಮೆ॥ ಪ್ರತ್ಯೂಷ ಅಸೋಸಿಯೇಟ್ಸ್ |
| 16. | ಶ್ರೀ ಬಿ.ಎನ್. ರಾಮಕೃಷ್ಣ, ಸಕಾಇಂ, ಮೈನಪಾ | 34. | ಶ್ರೀ ಕೆ.ಎ. ಕರಿಯಪ್ಪ, ನಾಗರೀಕ ಸಮಿತಿ ಸದಸ್ಯರು, ವಾರ್ಡ್-23 |
| 17 | ಶ್ರೀ ರಾಮಕೃಷ್ಣ, ಸಕಾಇಂ, ಮೈನಪಾ | 35. | ಶ್ರೀ ವಿ. ಕುಮಾರ್, ನಾಗರೀಕ ಸಮಿತಿ ಸದಸ್ಯರು, ವಾರ್ಡ್-23 |
| 18. | ಶ್ರೀ ಆರ. ನರಸಿಂಹಮೂರ್ತಿ, ಸಕಾಇಂ, ನರ್ಮ್ | | |

ಹಿಂದಿನ ಸಭೆಯ ದಿನಾಂಕ : 02/12/09

ಮುಂದಿನ ಸಭೆಯ ದಿನಾಂಕ : 06/01/10

ಮುಂದಿನ ಸಭೆಯ ವೇಳೆ : ಬೆಳಿಗ್ಗೆ 9.00 ಗಂಟೆಗೆ

ಮುಂದಿನ ಸಭೆಯ ಸ್ಥಳ : ಎಂ.ಸಿ.ಸಿ ಸಭೆಯ ಸಭಾಂಗಣ, ಮೈಸೂರು

ತಯಾರಿಸಿದವರು : ಶ್ರೀ ಬಿ.ಕೆ. ಸುರೇಶ್‌ಬಾಬು, ಅಧೀಕ್ಷಕ ಇಂಜಿನಿಯರ್ (ನರ್ಮ್)

ಕಳುಹಿಸಿರುವುದು : ಶ್ರೀ ಬಿ.ಕೆ. ಸುರೇಶ್‌ಬಾಬು, ಅಧೀಕ್ಷಕ ಇಂಜಿನಿಯರ್ (ನರ್ಮ್)

ಅಧೀಕ್ಷಕ ಅಭಿಯಂತರರು, ಮೈಸೂರು ಮಹಾನಗರಪಾಲಿಕೆ (ಜೆ.ಎನ್.ಎನ್.ನರ್ಮ್), ಇವರು ಪೂಜ್ಯ ಮಹಾಪೌರರು, ಹಾಗೂ ಪೂಜ್ಯ ಉಪ ಮಹಾಪೌರರು, ಜಿಲ್ಲಾಧಿಕಾರಿಗಳು ಮತ್ತು ನರ್ಮ್ ವಿಶೇಷಅಧಿಕಾರಿಗಳು, ಆಯುಕ್ತರು ಮೈಸೂರು ಮಹಾನಗರ ಪಾಲಿಕೆ, ಆಯುಕ್ತರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮತ್ತು ನಗರಪಾಲಿಕೆ ಸದಸ್ಯರು, ಎಲ್ಲಾ ಅಧಿಕಾರಿಗಳು, ಗುತ್ತಿಗೆದಾರರು, ಮಾಧ್ಯಮ ಪ್ರತಿನಿಧಿಗಳು ಮತ್ತು ಸಾರ್ವಜನಿಕರನ್ನು ಸ್ವಾಗತಿಸಿದರು.

ಡಿಸೆಂಬರ್ 15, 2009ರ ಅಂತ್ಯಕ್ಕೆ ನರ್ಮ್ ಯೋಜನೆಯ ಒಟ್ಟು ಆರ್ಥಿಕ ಪ್ರಗತಿ, ರೂ. 224.29 ಕೋಟಿಗಳ ಗುರಿಗೆ ಎದುರಾಗಿ ರೂ. 225.24 ಕೋಟಿಗಳಾಗಿರುತ್ತದೆ. ಕಾಮಗಾರಿಯು ಪ್ರಗತಿಯನ್ನು ಹೆಚ್ಚಿಸಿ ಮುಂಬರುವ ತಿಂಗಳುಗಳಲ್ಲಿ ಹೆಚ್ಚಿನ ಪ್ರಗತಿ ಸಾಧಿಸುವಂತೆ ಎಲ್ಲಾ ಅನುಷ್ಠಾನ ಅಧಿಕಾರಿಗಳಿಗೆ ಸೂಚಿಸಲಾಯಿತು.

ಸಭೆಯಲ್ಲಿ ಭಾಗವಹಿಸುವ ಆಸಕ್ತಿಯುಳ್ಳ ಸಾರ್ವಜನಿಕರು/ಸಂಘಸಂಸ್ಥೆಗಳು ಅವರ ಪ್ರಶ್ನೆಗಳು/ವಿಚಾರಣೆಗಳನ್ನು ಲಿಖಿತ ಮೂಲಕ ನೀಡುವಂತೆ ಮತ್ತೊಮ್ಮೆ ಪುನರುಚ್ಚರಿಸಲಾಯಿತು ಮತ್ತು ಅವುಗಳನ್ನು ಮುಂದಿನ ಸಭೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದ ಉತ್ತರಿಸಲಾಗುವುದು.

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| 1 | ಮೈಸೂರು ನಗರದಲ್ಲಿ ನೀರು ಸರಬರಾಜು ನೆಟ್‌ವರ್ಕ್‌ನ ರೀಮಾಡಲ್ಲಿಂಗ್, ಸಿಸ್ಟಮ್ ಆಟೋಮೇಷನ್ ಮತ್ತು ಸಮಗ್ರ ನಿರ್ವಹಣಾ ವ್ಯವಸ್ಥೆ ಒದಗಿಸುವ ಯೋಜನೆ: ಯೋಜನಾ ಅಂದಾಜು ಮೊತ್ತ ರೂ.65.56 ಕೋಟಿಗಳು<br>ಯೋಜನಾ ಮುಕ್ತಾಯ ದಿನಾಂಕ:ಜನವರಿ-2010 | ನವಂಬರ್ 15 2009ರ ಅಂತ್ಯಕ್ಕೆ ನಿಗಧಿಪಡಿಸಿದ್ದ ಗುರಿಯಾದ ರೂ. 66.83 ಕೋಟಿಗಳ ಎದುರಾಗಿ ರೂ. 66.95 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು. ಆರ್ಥಿಕ ಮತ್ತು ಭೌತಿಕ ಪ್ರಗತಿಯು ನಿಗಧಿತ ಗುರಿಗಿಂತ ಮುಂದಿರುತ್ತದೆ.<br>ಭೌತಿಕ ಪ್ರಗತಿಗೆ ಸಂಬಂಧಿಸಿದಂತೆ, ಕಾಮಗಾರಿಗೆ ಅಗತ್ಯವಿರುವ 54.17 ಕಿ.ಮಿ ಉದ್ದದ ಎಂ.ಎಸ್ ಪೈಪುಗಳಲ್ಲಿ 54.17 ಕಿ.ಮೀ ಉದ್ದದ ಪೈಪುಗಳನ್ನು ಶೇಖರಿಸಲಾಗಿರುತ್ತದೆ. ಇವುಗಳಲ್ಲಿ 44.11 ಕಿ.ಮೀ ಉದ್ದದ ಪೈಪುಗಳನ್ನು ಅಳವಡಿಸಲಾಗಿದ್ದು, 54.17 ಕಿ.ಮೀ ಉದ್ದಕ್ಕೆ ಒಳಭಾಗದ ಲೈನಿಂಗ್ ಮತ್ತು 54.17 ಕಿ.ಮೀ ಉದ್ದಕ್ಕೆ ಹೊರಭಾಗದ ಲೈನಿಂಗ್ ಪೂರ್ಣಗೊಳಿಸಲಾಗಿದೆ ಹಾಗೂ 29.62 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆ.<br>ಡಿಐ ಪೈಪುಗಳಿಗೆ ಸಂಬಂಧಿಸಿದಂತೆ, ಅಗತ್ಯವಿರುವ ಪೂರ್ಣ ಪ್ರಮಾಣದ 26.90 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಶೇಖರಿಸಲಾಗಿದ್ದು, 20.05 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಅಳವಡಿಸಲಾಗಿದೆ. ಹಾಗೂ 5.30 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿದೆ ಎಂದು ತಿಳಿಸಿದರು.<br>ಎಲ್ಲಾ 25 ಮೇಲ್ಮಟ್ಟದ ಶೇಖರಣಾ | ಡಿಸೆಂಬರ್ 15 2009ರ ಅಂತ್ಯಕ್ಕೆ ನಿಗಧಿಪಡಿಸಿದ್ದ ಗುರಿಯಾದ ರೂ. 68.71 ಕೋಟಿಗಳ ಎದುರಾಗಿ ರೂ. 68.90 ಕೋಟಿಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು. ಆರ್ಥಿಕ ಮತ್ತು ಭೌತಿಕ ಪ್ರಗತಿಯು ನಿಗಧಿತ ಗುರಿಗಿಂತ ಮುಂದಿರುತ್ತದೆ.<br>ಭೌತಿಕ ಪ್ರಗತಿಗೆ ಸಂಬಂಧಿಸಿದಂತೆ, ಕಾಮಗಾರಿಗೆ ಅಗತ್ಯವಿರುವ 54.17 ಕಿ.ಮಿ ಉದ್ದದ ಎಂ.ಎಸ್ ಪೈಪುಗಳಲ್ಲಿ 54.17 ಕಿ.ಮೀ ಉದ್ದದ ಪೈಪುಗಳನ್ನು ಶೇಖರಿಸಲಾಗಿರುತ್ತದೆ. ಮತ್ತು 46.05 ಕಿ.ಮೀ ಉದ್ದದ ಪೈಪುಗಳನ್ನು ಅಳವಡಿಸಲಾಗಿರುತ್ತದೆಯೆಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು. 54.17 ಕಿ.ಮೀ ಉದ್ದಕ್ಕೆ ಒಳಭಾಗದ ಲೈನಿಂಗ್ ಮತ್ತು 54.17 ಕಿ.ಮೀ ಉದ್ದಕ್ಕೆ ಹೊರಭಾಗದ ಲೈನಿಂಗ್ ಪೂರ್ಣಗೊಳಿಸಲಾಗಿದೆ ಹಾಗೂ 32.83 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನುನಡೆಸಲಾಗಿರುತ್ತದೆಯೆಂದು ತಿಳಿಸಲಾಯಿತು.<br>ಡಿಐ ಪೈಪುಗಳಿಗೆ ಸಂಬಂಧಿಸಿದಂತೆ, ಅಗತ್ಯವಿರುವ ಪೂರ್ಣ ಪ್ರಮಾಣದ 26.90 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಶೇಖರಿಸಲಾಗಿದ್ದು, 20.40 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಅಳವಡಿಸಲಾಗಿದೆ. ಹಾಗೂ 6.01 | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | ಟ್ಯಾಂಕುಗಳ ಕಾಮಗಾರಿಯು ವಿವಿಧ ಹಂತಗಳ ಪ್ರಗತಿಯಲ್ಲಿದೆ. ಎಂದು ತಿಳಿಸಿದರು.<br>ಕಾರ್ಯಪಾಲಕ ಅಭಿಯಂತರರು, ಕೆ.ಯು.ಡಬ್ಲ್ಯೂ.ಎಸ್&ಡಿಬಿ ರವರು ಮರಳಿನ ಕೊರತೆಯಿಂದ ಕಾಮಗಾರಿಯ ಪ್ರಗತಿಯು ಕುಂಠಿತಗೊಂಡಿರುತ್ತದೆಯೆಂದು ತಿಳಿಸಿದರು. ಆದರೆ ಕಾರ್ಯಪಾಲಕ ಅಭಿಯಂತರರು ರವರ ಈ ವಿವರಣೆಯನ್ನು ಒಪ್ಪಿಕೊಳ್ಳಲಾಗುವುದಿಲ್ಲ.<br>ಗುತ್ತಿಗೆದಾರರು ಅವಶ್ಯವಿರುವ ಮರಳನ್ನು ಸಂಗ್ರಹಿಸಲು ಸೂಕ್ತ ಕ್ರಮತೆಗೆದುಕೊಂಡು ಕಾಮಗಾರಿಯ ವೇಗವನ್ನು ಹೆಚ್ಚಿಸಲು ತಿಳಿಸಲಾಯಿತು. ಕಾರ್ಯಪಾಲಕ ಅಭಿಯಂತರರು ರವರು ಇದುವರೆಗೂ ಈ ಬಗ್ಗೆ ಜಿಲ್ಲಾಧಿಕಾರಿಗಳು ಮತ್ತು ನರ್ಮ್ ವಿಷೇಶಾಧಿಕಾರಿಗಳನ್ನು ಸಂಪರ್ಕಿಸಿರುವುದಿಲ್ಲವೆಂದು ತಿಳಿಸಿದರು.<br>ಒಟ್ಟಾರೆಯಾಗಿ ಮೆ॥ ನಾಗಾರ್ಜುನ ಕಂಪನಿಯವರ ಪ್ರಗತಿಯು ಸಮಾಧನಕರವಾಗಿರುವುದಿಲ್ಲ. ಕುಂಠಿತ ಪ್ರಗತಿಗೆ ಸಂಬಂಧಿಸಿದಂತೆ ಕಂಪನಿಗೆ ಹಲವಾರು ನೋಟಿಸ್‌ಗಳನ್ನು ನೀಡಿರುವುದಾಗಿ ಕಾರ್ಯಪಾಲಕ ಇಂಜಿನಿಯರ್‌ರವರು ತಿಳಿಸಿದರು.<br>ನಾಗಾರ್ಜುನ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರನ್ನು ಮುಂದಿನ ಸಭೆಗೆ ಹಾಜರಾಗುವಂತೆ ಕೋರಲು ತಿಳಿಸಲಾಯಿತು. ಕಂಪನಿಯ ಯೋಜನಾ ನಿರ್ದೇಶಕರಿಗೆ ಈ ಬಗ್ಗೆ ಕ್ರಮ ತೆಗೆದುಕೊಳ್ಳಲು ತಿಳಿಸಲಾಯಿತು.<br>ಯೋಜನೆಯನ್ನು ಮುಂಚಿತವಾಗಿ ಪೂರ್ಣಗೊಳಿಸಲು ಅನುಕೂಲವಾಗುವಂತೆ ಕಾರ್ಯಕ್ರಮ ಪಟ್ಟಿಯನ್ನು ಪರೀಕ್ಷಿಸುವಂತೆ ಮತ್ತು ಅದನ್ನು ಮುಂದಿನ ಸಭೆಯೊಳಗೆ ತಪ್ಪದೇ ಸಲ್ಲಿಸುವಂತೆ ಕಾರ್ಯಪಾಲಕ ಇಂಜಿನಿಯರ್‌ರವರಿಗೆ ಸೂಚಿಲಾಯಿತು. | ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿದೆ ಎಂದು ತಿಳಿಸಿದರು.<br>ಎಲ್ಲಾ 25 ಮೇಲ್ಮಟ್ಟದ ಶೇಖರಣಾ ಟ್ಯಾಂಕುಗಳ ಕಾಮಗಾರಿಯು ವಿವಿಧ ಹಂತಗಳ ಪ್ರಗತಿಯಲ್ಲಿದೆ. ಎಂದು ತಿಳಿಸಿದರು.<br>ಪೆರಿ ಅರಬನ್ ಎರಿಯಾ ಮತ್ತು ನಗರ ಪಾಲಿಕೆ ವ್ಯಾಪ್ತಿಯ ಹೊರಗಿನ ಮೂಡಾ ಎರಿಯಾಗಳಿಗೆ ನೀರು ಸರಬರಾಜು ಅವಶ್ಯಕತೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗೆ, ಜಿಲ್ಲಾಧಿಕಾರಿಗಳು ಮತ್ತು ವಿಶೇಷಾಧಿಕಾರಿಗಳು (ನರ್ಮ್) ಇವರು ನೀರು ಸರಬರಾಜು ಬೇಡಿಕೆಯನ್ನು ವಿಸ್ತಾರವಾಗಿ ನಿರ್ವಹಣೆಗೆ ಅನುಕೂಲವಾಗುವಂತೆ ಮೈಸೂರಿನಲ್ಲಿ ಪ್ರತ್ಯೇಕವಾಗಿ ನೀರು ಸರಬರಾಜು ಮಂಡಳಿಯನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಾಗಿ ತಿಳಿಸಿದರು.<br>ಪ್ರಸ್ತುತ, ಲಾರಿ ಮಾಲೀಕರ ಮುಷ್ಕರದಿಂದಾಗಿ ಕಾಮಗಾರಿ ಪ್ರಗತಿಗೆ ಅಡಚಣೆಯಾಗಿದ್ದು, ಪರಿಷ್ಕೃತ ಆಕ್ಷನ್‌ಪ್ಲಾನ್ ಅನ್ನು ಸಧ್ಯದಲ್ಲಿ ಸಲ್ಲಿಸುವುದಾಗಿ ಕಾರ್ಯಪಾಲಕ ಇಂಜಿನಿಯರ್, ಕೆಯುಡಬ್ಲ್ಯೂಎಸ್&ಡಿಬಿ ಇವರು ಭರವಸೆ ನೀಡಿದರು. ಮುಂದಿನ ಪ್ರಗತಿ ಪರಿಶೀಲನಾ ಸಭೆಯೊಳಗೆ ಪರಿಷ್ಕೃತ ಆಕ್ಷನ್‌ಪ್ಲಾನ್ ಅನ್ನು ತಪ್ಪದೇ ಸಲ್ಲಿಸುವಂತೆ ಕಾರ್ಯಪಾಲಕ ಇಂಜಿನಿಯರ್,ರವರಿಗೆ ತಿಳಿಸಲಾಯಿತು. | |
| 2. | ಸ್ಕಾಡಾ ಯೋಜನೆ: ಅಂದಾಜು ಮೊತ್ತ: ರೂ. 5.24 ಕೋಟಿ | | ಚರ್ಚೆಯಾಗಿರುವುದಿಲ್ಲ. | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | Agency: M/s. Mechatronics<br>ಅವಧಿ: 9 ತಿಂಗಳು<br>ಮುಕ್ತಾಯ ವಾಗಬೇಕಾದುದು : ಜುಲೈ-2009 | – | | |
| **3.** | **24 x 7 ನೀರು ಸರಬರಾಜು**<br>**ಪಶ್ಚಿಮ ವಲಯ: ಅಂದಾಜುಮೊತ್ತ 56.07 ಕೋಟಿ ರೂ. ಸಿಎಸ್‌ಆರ್, ಕುವೆಂಪುನಗರ ಹೆಚ್.ಎಲ್.ಆರ್ ವಲಯದ ಭಾಗಶ: ವಲಯಗಳು ಮತ್ತು ಪೂರ್ವವಲಯ ಹೆಚ್.ಎಲ್.ಆರ್ ವಲಯದ ಭಾಗಶ: ಅಂದಾಜುಮೊತ್ತ 45.84 ಕೋಟಿ ರೂ. ಜರ್ಮನ್ ಪ್ರೆಸ್, ದೇವನೂರು, ಬಳ್ಳಾಲ್ ವೃತ್ತ ವಲಯಗಳು ಮತ್ತು ಹೆಚ್.ಎಲ್.ಆರ್ ವಲಯದ ಭಾಗಶ:**<br>ಮುಕ್ತಾಯವಾಗಬೇಕಾದುದು: Jan-2013 | ಜಸ್ಕೋ ಅಧಿಕಾರಿಗಳು ವಲಯ ಅಧಿಕಾರಿಗಳು ಮತ್ತು ನಗರಪಾಲಿಕೆಯ ಸದಸ್ಯರೊಂದಿಗೆ ಯಾವುದೇ ಸಭೆಗಳನ್ನು ನಡೆಸುತ್ತಿಲ್ಲವೆಂದು ಶ್ರೀ ಲಕ್ಷ್ಮಣ ಸಂಚಾಲಕರು, ಎಸಿಐಸಿಎಂ ಇವರು ತಿಳಿಸಿದರು.<br>ಇದಕ್ಕೆ ಉತ್ತರವಾಗಿ, ವಲಯವಾರು ಸಭೆಗಳನ್ನು ನಡೆಸಲು ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಲಾಗಿದ್ದು, ಅದರಂತೆ ಸಭೆಗಳನ್ನು ನಡೆಸಲಾಗುವುದೆಂದು ಜಸ್ಕೋ ಅಧಿಕಾರಿಗಳು ತಿಳಿಸಿದರು. | 24/7 ನೀರು ಸರಬರಾಜು ಯೋಜನೆ ಅನುಷ್ಠಾನವನ್ನು ದಿನಾಂಕ 01.01.2010 ರಿಂದ ರಾಜೀವನಗರ, ಗೌಸಿಯಾನಗರ, ಸಿದ್ಧಾರ್ಥನಗರ ಮತ್ತು ಜೆ.ಪಿ. ನಗರಗಳಲ್ಲಿ ಕೈಗೆತ್ತಿಕೊಳ್ಳಲು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರಿಗೆ ಸೂಚಿಸಲಾಯಿತು.<br>ನೀರು ಸರಬರಾಜು ಯೋಜನೆಗೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಅಧಿನಿಯಮ ಅಡಿಯಲ್ಲಿ ಕೋರಿರುವ ಮಾಹಿತಿಗೆ, ಕಾರ್ಯಪಾಲಕ ಇಂಜಿನಿಯರ್ ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ನೀಡಿರುವ ಉತ್ತರವು ಸಮಂಜಸವಾಗಿರುವುದಿಲ್ಲವೆಂದು ಶ್ರೀ ಲಕ್ಷ್ಮಣ್ ಸಂಚಾಲಕರು ಎಸಿಐಸಿಎಂ ಇವರು ತಿಳಿಸಿದರು.<br>ನರ್ಮ್ ಯೋಜನೆಗೆ ಸಂಬಂಧಿಸಿದಂತೆ ಮಾಹಿತಿ ಹಕ್ಕು ಅಧಿನಿಯಮ ಅಡಿಯಲ್ಲಿ ಸಾರ್ವಜನಿಕರಿಂದ ಕೋರಲಾಗುವ ಮಾಹಿತಿಗಳಿಗೆ ಸಂಬಂಧಿಸಿದಂತೆ ವಿವರಗಳ ಕರಡನ್ನು ಆಯುಕ್ತರು, ಎಂಸಿಸಿ ಇವರ ಮುಖಾಂತರ ವಿಶೇಷಾಧಿಕಾರಿಗಳಿಗೆ ಸಲ್ಲಿಸಿ ಅವರಿಂದ ಅನುಮೋದನೆ ಪಡೆದ ನಂತರ, ಸಂಬಂಧಪಟ್ಟವರಿಗೆ ಮಾಹಿತಿಯನ್ನು ಒದಗಿಸುವಂತೆ ಎಲ್ಲಾ ಅನುಷ್ಠಾನ ಅಧಿಕಾರಿಗಳಿಗೆ ಸೂಚಿಸಲಾಯಿತು. | |
| **4.** | **ಮೈಸೂರು ನಗರಕ್ಕೆ ಸಗಟು ನೀರು ಸರಬರಾಜನ್ನು ಕಬಿನಿ** | ಒಟ್ಟು ಏಳು ಕಾಮಗಾರಿಗಳಲ್ಲಿ ಈಗಾಗಲೇ ಮೂರು ಕಾಮಗಾರಿ ಪ್ರಾರಂಭಿಸಲಾಗಿದ್ದು, ಉಳಿದ ನಾಲ್ಕು | ಹಿಂದಿನ ಸಭೆಯಲ್ಲಿ ನಿರ್ಧರಿಸಿದಂತೆ, ಕಬಿನಿ ನದಿಯಿಂದ ನೀರು ಸರಬರಾಜು ಯೋಜನೆ ಅಡಿಯಲ್ಲಿ ಭೂಸ್ವಾಧೀನಕ್ಕೆ | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | ನದಿಯಿಂದ ತರುವ ಯೋಜನೆ:<br>ಯೋಜನೆಯ ಅಂದಾಜು ರೂ. **108.81 ಕೋಟಿ**<br>ಮುಕ್ತಾಯವಾಗಬೇಕಾದುದು Jan-2012 | ಕಾಮಗಾರಿಗಳ ಸ್ಥಳದಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಲು ರೈತರ ವಿರೋಧವಿರುವುದಾಗಿ ಕಾರ್ಯಪಾಲಕ ಇಂಜಿನಿಯರ್‌ರವರು ತಿಳಿಸಿದರು.<br>ಈ ನಾಲ್ಕು ಸ್ಥಳಗಳಲ್ಲಿ ಪೋಲೀಸ್‌ರ ರಕ್ಷಣೆಯೊಂದಿಗೆ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸುವಂತೆ ಜಿಲ್ಲಾಧಿಕಾರಿಗಳು ಹಾಗೂ ವಿಶೇಷಾಧಿಕಾರಿಗಳು ನರ್ಮ್ ಇವರು ಆದೇಶಿಸಿದರು ಮತ್ತು ಈ ಸಂಬಂಧ ಯಾವುದೇ ವಿಳಂಬ ಮಾಡಬಾರದಾಗಿ ತಿಳಿಸಿದರು. | ಬರುವ ಭೂಮಾಲೀಕರುಗಳ ಜೊತೆ ದಿನಾಂಕ 07.12.2009 ರಂದು ಸಭೆಯನ್ನು ನಡೆಸಲಾಗಿರುತ್ತದೆ.<br>ಭೂಮಾಲೀಕರು ಪರಿಹಾರವನ್ನು ನೀಡಲು ಒತ್ತಾಯಿಸುತ್ತಿದ್ದು, ಪರಿಹಾರ ನೀಡುವ ತನಕ ಕಾಮಗಾರಿಯನ್ನು ಪ್ರಾರಂಭಿಸಲು ಬಿಡುತ್ತಿಲ್ಲವೆಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು.<br>ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ಮಾನ್ಯಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ದಿನಾಂಕ 18.12.2009 ನಂತರ ಏರ್ಪಡಿಸಲು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರಿಗೆ ಸೂಚಿಸಲಾಯಿತು. | |
| **5** | ಮೈಸೂರು ನಗರದ ಸಾರಿಗೆ ವ್ಯವಸ್ಥೆಗೆ ಮೂಲಭೂತ ಸೌಕರ್ಯ ಒದಗಿಸುವುದು.<br>ಯೋಜನಾ ವೆಚ್ಚ: ರೂ **85.25** ಕೋಟಿಗಳು. ಗುತ್ತಿಗೆ ಪ್ರೀಮಿಯಂ: **17.50%** ಮೇಲ್ಪಟ್ಟು (ರೂ. **108.59** ಕೋಟಿ) ಗುತ್ತಿಗೆ ಅವಧಿ: ಮಾನ್ಸೂನ್ ಬಿಟ್ಟು **18** ತಿಂಗಳು (3 ತಿಂಗಳು ಮಾನ್ಸೂನ್ ಕಾಲ)<br>ಮುಕ್ತಾಯವಾಗಬೇಕಾದುದು Jan-2010 | ಚಾಮುಂಡಿ ಬೆಟ್ಟದ ಬಸ್ ನಿಲ್ದಾಣ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸುವಂತೆ ಜಿಲ್ಲಾಧಿಕಾರಿಗಳು ಹಾಗೂ ವಿಶೇಷಾಧಿಕಾರಿಗಳು ನರ್ಮ್ ಇವರು ಆದೇಶಿಸಿದರು.<br>ಕ.ರಾ.ರ.ಸ.ನಿ. ಸಂಸ್ಥೆಯು ಪಾಲಿಕೆಯ ಗಮನಕ್ಕೆ ತರದೆ ನರ್ಮ್ ನೆರವಿನಡಿ ನಿರ್ಮಿಸಿರುವ ವಾಣಿಜ್ಯ ಸಂಕೀರ್ಣದಲ್ಲಿನ ಅಂಗಡಿ ಮಳಿಗೆಗಳನ್ನು ನೀಡಲು ಗ್ಲೋಬಲ್ ಟೆಂಡರ್‌ನ್ನು ಕರೆಯಲಾಗಿದೆಯೆಂದು ಶ್ರೀ ಲಕ್ಷ್ಮಣ ಸಂಚಾಲಕರು, ಎಸಿಐಸಿಎಂ ಇವರು ತಿಳಿಸಿದರು.<br>ನರ್ಮ್ ಯೋಜನೆಯಡಿ ಯಾವುದೇ ಟೆಂಡರ್‌ಗಳನ್ನು ಕರೆಯಬೇಕಾದಲ್ಲಿ ಇನ್ನು ಮುಂದೆ ನಗರಪಾಲಿಕೆಯ ಅನುಮತಿಯನ್ನು ಪಡೆಯುವಂತೆ ಜಿಲ್ಲಾಧಿಕಾರಿಗಳು ಹಾಗೂ ವಿಶೇಷಾಧಿಕಾರಿಗಳು ನರ್ಮ್ ಇವರು ಕ.ರಾ.ರ.ಸ.ನಿ. ಸಂಸ್ಥೆಗೆ ಆದೇಶಿಸಿದರು. | ನಗರದ ಸಂಚಾರ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸಲು ನರ್ಮ್ ಅಡಿಯಲ್ಲಿ ಯಾವುದೇ ಹಣವನ್ನು ಮೀಸಲಾಗಿಟ್ಟಿರುವುದಿಲ್ಲವೆಂದು ಬದಲಾಗಿ ಹಣವನ್ನು ಬಸ್ಸುಗಳನ್ನು ಖರಿದೀಸಲು ಉಪಯೋಗಿಸಲಾಗುತ್ತಿದೆಯೆಂದು ಶ್ರೀ ಲಕ್ಷ್ಮಣ್ ಸಂಚಾಲಕರು ಎಸಿಐಸಿಎಂ ಇವರು ತಿಳಿಸಿದರು.<br>ಪೋಲೀಸ್ ಆಯುಕ್ತರು, ಪಾಲಿಕೆ ಆಯುಕ್ತರು, ಮೂಡಾ ಆಯುಕ್ತರು ಹಾಗೂ ಕೆ.ಯು.ಡಬ್ಲ್ಯೂಎಸ್ & ಡಿಬಿ, ಬಿಸ್‌ಎನ್‌ಎಲ್ ಚೆಸ್ಕಾಂ, ಕೆ.ಎಸ್.ಆರ್.ಟಿ.ಸಿ., ಅರಣ್ಯ ಇಲಾಖೆಯ ಮುಖ್ಯಸ್ಥರುಗಳನ್ನು ಒಳಗೊಂಡಂತೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು 'ಸಂಚಾರ ಸಮನ್ವಯ ಸಮಿತಿಯನ್ನು' ರಚಿಸಲು ನಿರ್ಧರಿಸಲಾಯಿತು.<br>ಚಾಲ್ತಿಯಲ್ಲಿರುವ ಸರ್ಕಾರದ ಆದೇಶದ ಪ್ರಕಾರ, ಸದರಿ ಸಮಿತಿಯನ್ನು ರಚಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಯೋಜನಾ ನಿರ್ದೇಶಕರು, ಡಿಯುಡಿಸಿ ಇವರಿಗೆ ಸೂಚಿಸಲಾಯಿತು. | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| **6.** | **ಮೈಸೂರು ನಗರದ 20 ಆಯ್ದ ಕೊಳಚೆ ಪ್ರದೇಶಗಳ ಪುನರ್ ವಸತಿ ಯೋಜನೆ: ಅಂದಾಜು ವೆಚ್ಚ: ರೂ. 45.27 ಕೋಟಿಗಳು.** ಹಂತ–**1** ಮುಕ್ತಾಯವಾಗಬೇಕಾದುದು Jan-2012 | ನಿಗಧಿ ಪಡಿಸಿದ ಗುರಿಯಂತೆ ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಕಾರ್ಯಪಾಲಕ ಇಂಜಿನಿಯರ್ ಕೆ.ಎಸ್.ಸಿ.ಬಿ ಇವರು ತಿಳಿಸಿದರು.<br>ನರ್ಮ್ ಯೋಜನೆಯಡಿ ಕೊಳಚೆ ನಿರ್ಮೂಲನಾ ಮಂಡಳಿಯಿಂದ ನಿರ್ಮಿಸಲಾಗುತ್ತಿರುವ ಮನೆಗಳಿಗೆ ನೀರಿನ ಸಂಪರ್ಕ ತಲುಪಿಸಲು ಕೈಗೊಂಡಿರುವ ಕ್ರಮಗಳ ಬಗ್ಗೆ ಶ್ರೀ ಲಕ್ಷ್ಮಣ ಸಂಚಾಲಕರು, ಎಸಿಐಸಿಎಂ ಇವರು ಸಭೆಯಲ್ಲಿ ಚರ್ಚಿಸಿದರು. ಈ ಬಗ್ಗೆ ವಿವರವಾದ ಮಾಹಿತಿಯನ್ನು ಶ್ರೀ ಲಕ್ಷ್ಮಣ ಸಂಚಾಲಕರು, ಎಸಿಐಸಿಎಂ ಇವರಿಗೆ ನೀಡುವಂತೆ ಕಾರ್ಯಪಾಲಕ ಇಂಜಿನಿಯರ್ ಕೆ.ಎಸ್.ಸಿ.ಬಿ ಇವರಿಗೆ ಸೂಚಿಸಲಾಯಿತು. | ಮೊದಲ ಹಂತದಲ್ಲಿ ಬರುವ ಫಲಾನುಭವಿಗಳ ಪಟ್ಟಿಯನ್ನು ಅಂತಿಮಗೊಳಿಸುವಂತೆ ಕಾರ್ಯಪಾಲಕ ಇಂಜಿನಿಯರ್, ಕೆಎಸ್‌ಸಿಬಿ ಇವರಿಗೆ ಸೂಚಿಸಲಾಯಿತು. ಮೊದಲ ಹಂತದಲ್ಲಿ ಒಟ್ಟು 14 ಜಾಗಗಳಿದ್ದು, ಪ್ರತಿ ಭಾಗದಲ್ಲಿ ಫಲಾನುಭವಿಗಳೊಂದಿಗೆ ಪ್ರತ್ಯೇಕ ಸಭೆ ನಡೆಸುವಂತೆ ಸೂಚಿಸಲಾಯಿತು.<br>ಮನೆಗಳನ್ನು ಹಂಚಿಕೆಮಾಡಲು ಫಲಾನುಭವಿಗಳ ಪಟ್ಟಿಯನ್ನು ದಿನಾಂಕ 23.12.2009ರ ಒಳಗೆ ಆಯ್ಕೆ ಮೂಲಕ ಅಂತಿಮಗೊಳಿಸಲು ಹಾಗೂ ಅದಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಲು ಒಂದುವಾರ ಕಾಲಾವಕಾಶ ನೀಡುವಂತೆ ಕಾರ್ಯಪಾಲಕ ಇಂಜಿನಿಯರ್, ಕೆಎಸ್‌ಸಿಬಿ ಇವರಿಗೆ ಸೂಚಿಸಲಾಯಿತು. ಹಾಗೂ ಅಂತಿಮ ಪಟ್ಟಿಯನ್ನು ದಿನಾಂಕ 30.12.2009 ರಂದು ಪ್ರಕಟಿಸಬೇಕೆಂದು ತಿಳಿಸಲಾಯಿತು. ಸದರಿ ಕಾರ್ಯಕ್ರಮ ಪಟ್ಟಿಗೆ ಅನುಗುಣವಾಗಿ ಕಾರ್ಯನಿರ್ವಹಿಸಲು ಸೂಚಿಸಲಾಯಿತು. ಫಲಾನುಭವಿಗಳನ್ನು ಗುರುತಿಸುವಲ್ಲಿ ಏನಾದರೂ ತಪ್ಪುಗಳಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.<br>ಫಲಾನುಭವಿಗಳ ಸಂಸ್ಥೆಯನ್ನು ರಚಿಸಿ ಅವುಗಳನ್ನು ನೊಂದಾಯಿಸಲು ಕ್ರಮ ಕೈಗೊಳ್ಳಲು ಆಯುಕ್ತರು, ಎಂಸಿಸಿ, ಇವರು ತಿಳಿಸಿದರು. ಅಲ್ಲದೆ, ಈಗಾಗಲೇ ಹಿಂದಿನ ಸಭೆಗಳಲ್ಲಿ ನಿರ್ಧರಿಸಿರುವಂತೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಾಯವನ್ನು ಪಡೆದುಕೊಳ್ಳಲು ಸೂಚಿಸಲಾಯಿತು.<br>ಜೆ.ಪಿ. ನಗರದಲ್ಲಿ ನಿರ್ಮಾಣವಾಗುತ್ತಿರುವ ಸ್ಲಂ ಮನೆಗಳ ನಿರ್ಮಾಣ ಕಾಮಗಾರಿ ಕಳೆದ 6 ತಿಂಗಳಿನಿಂದ ನಿಂತಿರುವುದಾಗಿ ಶ್ರೀ ಭೈರಪ್ಪ, ಪಾಲಿಕೆ ಸದಸ್ಯರು ಇವರು ತಿಳಿಸಿದರು. ಇದಕ್ಕೆ ಉತ್ತರವಾಗಿ, ಕಾಮಗಾರಿಯು ಕಳೆದ 20 ದಿನಗಳಿಂದ ನಿಂತಿರುವುದಾಗಿ ಕಾರ್ಯಪಾಲಕ ಇಂಜಿನಿಯರ್, ತಿಳಿಸಿದರು. | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | | | ಸದರಿ ಪರಿಸ್ಥಿತಿಯನ್ನು ಅಧೀಕ್ಷಕ ಇಂಜಿನಿಯರ್ (ನರ್ಮ್), ಇವರ ಗಮನಕ್ಕೆ ತಂದಿರುವುದಿಲ್ಲವಾದ್ದರಿಂದ, ಇನ್ನು ಮುಂದೆ ಕೆಲಸಗಳು ಸ್ಥಗಿತಗೊಂಡಲ್ಲಿ ಅವುಗಳ ವಿವರಗಳನ್ನು ಅಧೀಕ್ಷಕ ಇಂಜಿನಿಯರ್ (ನರ್ಮ್), ಇವರಿಗೆ ಎಲ್ಲಾ ಅನುಷ್ಠಾನ ಅಧಿಕಾರಿಗಳು ತಪ್ಪದೇ ವರದಿಸುವಂತೆ ಸಭೆಯಲ್ಲಿ ನಿರ್ಧರಿಸಲಾಯಿತು.<br>ಸದರಿ ಕಾಮಗಾರಿ ಸ್ಥಳವನ್ನು ಪರಿವೀಕ್ಷಿಸಿ ವರದಿ ನೀಡುವಂತೆ ಅಧೀಕ್ಷಕ ಇಂಜಿನಿಯರ್ (ನರ್ಮ್), ಇವರಿಗೆ ಸೂಚಿಸಲಾಯಿತು. | |
| 7. | 1.ಮೈಸೂರು-ಬೆಂಗಳೂರು ರಸ್ತೆಯಿಂದ ಮೈಸೂರು-ನಂಜನಗೂಡುವರೆಗೆ 2 ಪಥದ ಹೊರ ವರ್ತುಲದ ರಸ್ತೆಯನ್ನು ಸರ್ವೀಸ್ ರಸ್ತೆಯೊಂದಿಗೆ 6 ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವುದು (0+0.25 ಕಿ.ಮಿ ಪಶ್ಚಿಮದ ಕಡೆಗೆ) 2. ಮೈಸೂರು-ಬೆಂಗಳೂರು ಹೊರ ವರ್ತುಲ ರಸ್ತೆಯಿಂದ- ಮೈಸೂರು ಬನ್ನೂರು ರಸ್ತೆವರೆಗೆ 4 ಪಥದ ರಸ್ತೆಯನ್ನು ಸರ್ವೀಸ್ ರಸ್ತೆಯೊಂದಿಗೆ 6 ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವುದು (0 ಯಿಂದ 7.49ಕಿ.ಮಿ ಪೂರ್ವದ ಕಡೆಗೆ)<br>ಅಂದಾಜು ವೆಚ್ಚ: ರೂ. 219.03 ಕೋಟಿಗಳು. ಅನುಮೋದಿಸಿದ ದಿ:15.02.08 | ಸದರಿ ಯೋಜನೆಗೆ ತಯಾರಿಸಿರುವ ಅಂದಾಜು ಪಟ್ಟಿಯಲ್ಲಿ ಕೆಲವೊಂದು ತಾಂತ್ರಿಕ ನ್ಯೂನತೆಗಳನ್ನು ಅಧೀಕ್ಷಕ ಇಂಜಿನಿಯರ್ ಮುಡಾ ಇವರು ಗಮನಿಸಿರುವುದಾಗಿ ಆಯುಕ್ತರು ಮುಡಾ ಇವರು ತಿಳಿಸಿದರು. ಈ ಬಗ್ಗೆ ನಾಲ್ಕು ಅಭಿಯಂತರುಗಳನ್ನು ಒಳಗೊಂಡಿರುವ ತಂಡವನ್ನು ರಚಿಸಲಾಗಿದ್ದು, ಅವರು ಅಂದಾಜು ಪಟ್ಟಿಯನ್ನು ಪರಿಶೀಲಿಸಿ ಸರಿಪಡಿಸಲಾಗಿದ್ದು, ಇನ್ನು ಎರಡು ದಿನಗಳೊಳಗೆ ಟೆಂಡರ್‌ಗಳನ್ನು ಕರೆಯಲಾಗುವುದೆಂದು ತಿಳಿಸಿದರು.<br>ವರ್ತುಲ ರಸ್ತೆ ಕಾಮಗಾರಿ ಪೂರ್ಣಗೊಂಡ ನಂತರದ ನಿರ್ವಹಣಾ ಅವಧಿಯನ್ನು ಒಂದು ವರ್ಷದಿಂದ ಮೂರು ವರ್ಷದವರೆಗೆ ಹೆಚ್ಚಿಸಿರುವುದಾಗಿ ಜಿಲ್ಲಾಧಿಕಾರಿಗಳು ಹಾಗೂ ವಿಶೇಷಾಧಿಕಾರಿಗಳು ನರ್ಮ್ ಇವರು ತಿಳಿಸಿದರು. | ಚರ್ಚೆಯಾಗಿರುವುದಿಲ್ಲ. | |
| 8. | ದೊಡ್ಡ ಮಳೆನೀರು ಚರಂಡಿ ಪುನರ್ ನಿರ್ಮಾಣ<br>ಅಂದಾಜು ಮೊತ್ತ: ರೂ 384.60 ಕೋಟಿಗಳು | ದೊಡ್ಡ ಮಳೆನೀರು ಚರಂಡಿಗಳನ್ನು ಅವೈಜ್ಞಾನಿಕವಾಗಿ ನಿರ್ಮಿಸಲಾಗುತ್ತಿದೆ-ಯೆಂದು ಹಾಗೂ ಮಳೆಯ ನೀರು ಇಂಗಲು ಯಾವುದೇ ಅವಕಾಶ ಕಲ್ಪಿಸಿರುವುದಿಲ್ಲವೆಂದು ಶ್ರೀ ಲಕ್ಷ್ಮಣ | ಚರ್ಚೆಯಾಗಿರುವುದಿಲ್ಲ. | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | ಷರಾ |
|---|---|---|---|---|
| | (ಸದ್ಯಕ್ಕೆ ರೂ 125.00 ಕೋಟಿಗೆ ಮಿತಿಗೊಳಿಸಲಾಗಿದೆ)<br>ಮುಕ್ತಾಯವಾಗಬೇಕಾದುದು<br>ಡಿಸೆಂಬರ್ 2011. | ಸಂಚಾಲಕರು, ಎಸಿಐಸಿಎಂ ಇವರು ತಿಳಿಸಿದರು. ಮಳೆ ನೀರನ್ನು ಇಂಗಿಸಲು ಅವಶ್ಯಕ ಸ್ಥಳಗಳಲ್ಲಿ ಇಂಗು ಗುಂಡಿಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದೆಂದು ಅಧೀಕ್ಷಕ ಅಭಿಯಂತರರು, ನರ್ಮ್ ಇವರು ತಿಳಿಸಿದರು. | | |
| 9. | ಘನತ್ಯಾಜ್ಯ ವಸ್ತು ನಿರ್ವಹಣೆ: ಮೈಸೂರು ನಗರದಲ್ಲಿ ಸಮಗ್ರ ಮುನ್ಸಿಪಲ್ ಸಾಲಿಡ್ ವೇಸ್ಟ್ ಮ್ಯಾನೆಜ್‌ಮೆಂಟ್ ಪ್ಲಾಂಟ್ ಅಭಿವೃದ್ಧಿ ಪಡಿಸುವುದು.<br>ಅನುಮೋದಿತ ದಿ: 19-12-2008<br>ಯೋಜನೆಯ ಮೊತ್ತ ರೂ. 29.98 ಕೋಟಿ<br>ಮುಕ್ತಾಯವಾಗಬೇಕಾದುದು ಜೂನ್ 2010. | ಒಟ್ಟು 168 ಆಟೋ ಟಿಪ್ಪರ್‌ಗಳಲ್ಲಿ ಈಗಾಗಲೇ 46 ಆಟೋ ಟಿಪ್ಪರ್‌ಗಳನ್ನು ಖರಿದಿಸಲಾಗೆದೆಯೆಂದು ಅಧೀಕ್ಷಕ ಅಭಿಯಂತರರು, ನರ್ಮ್ ಇವರು ತಿಳಿಸಿದರು. | ಚರ್ಚೆಯಾಗಿರುವುದಿಲ್ಲ. | |
| 10. | ಮೈಸೂರು ನಗರದ ಪಾರಂಪರಿಕ ಕಟ್ಟಡಗಳು ಹಾಗೂ ವೃತ್ತಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು. | ಚರ್ಚೆಯಾಗಿರುವುದಿಲ್ಲ. | ಚರ್ಚೆಯಾಗಿರುವುದಿಲ್ಲ. | |
| 11. | ಇ.ಡಬ್ಲ್ಯೂ.ಎಸ್. ಮನೆಗಳು ಮತ್ತು ಮೂಲಭೂತ ಅಭಿವೃದ್ಧಿ ಪ್ರಾಧಿಕಾರ ಲಿಮೆಟೆಡ್. ಬಿ.ಎಸ್.ಯು.ಪಿ. ಅಡಿಯಲ್ಲಿ<br>ಯೋಜನೆಯ ಮೊತ್ತ ರೂ. 52.35 ಕೋಟಿ<br>ಮುಕ್ತಾಯವಾಗಬೇಕಾದ ದಿನಾಂಕ: | ಚರ್ಚೆಯಾಗಿರುವುದಿಲ್ಲ. | ಚರ್ಚೆಯಾಗಿರುವುದಿಲ್ಲ. | |

<u>ಸಾಮನ್ಯ ಚರ್ಚೆ:</u>

- ಲಾರಿ ಮಾಲೀಕರುಗಳ ಮುಷ್ಕರದಿಂದಾಗಿ ಕಾಮಗಾರಿಗಳ ಪ್ರಗತಿಯು ಕುಂಠಿತಗೊಂಡಿರುವುದಾಗಿ ಎಲ್ಲಾ ಅನುಷ್ಠಾನ ಅಧಿಕಾರಿಗಳು ತಿಳಿಸಿದರು.

- ಶ್ರೀ ಕುಮಾರ್, ಬೂತ್‌ಕಮಿಟಿ ಲೀಡರ್ ಇವರು ಸಮುದಾಯ ಸಹಭಾಗಿತ್ವ ನಿಧಿ ಅಡಿಯಲ್ಲಿ ಸಲ್ಲಿಸಿರುವ ಯೋಜನೆಗಳ ಹಂತದ ಬಗ್ಗೆ ವಿವರ ಕೋರಿದರು. ಇದಕ್ಕೆ ಉತ್ತರವಾಗಿ, ಸಮುದಾಯ ಸಹಭಾಗಿತ್ವ ನಿಧಿ ಅಡಿಯಲ್ಲಿ ಮೈಸೂರು ನಗರದಿಂದ ಒಟ್ಟು 105 ಪ್ರಸ್ತಾವನೆಗಳನ್ನು ಸಲ್ಲಿಸಿದ್ದು, ಅವುಗಳಲ್ಲಿ ಇದುವರೆಗೆ 10 ಯೋಜನೆಗಳು ಅನುಮೋದನೆಯಾಗಿರುವುದಾಗಿ ಮತ್ತು 23 ಯೋಜನೆಗಳು ಪಾಲಿಕೆಯ ನಿರ್ಭಂದಿತ ಕೆಲಸದ ಅಡಿಯಲ್ಲಿ ಬರುವುದರಿಂದ, ಇದನ್ನು ಭಾರತ ಸರ್ಕಾರದದಲ್ಲಿ ಪರಿಗಣಿಸಿರುವುದಿಲ್ಲವೆಂದು ಪಾಲಿಕೆ ಆಯುಕ್ತರು, ತಿಳಿಸಿದರು. ಅಲ್ಲದೆ, ದಿನಾಂಕ 05.12.2009 ರಂದು ನಡೆದ ಸಭೆಯಲ್ಲಿ ಈ ಬಗ್ಗೆ ಭಾರತ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದು, ಸಂಬಂಧಪಟ್ಟ ಅಧಿಕಾರಿಗಳು ಬಾಕಿ ಇರುವ ಪ್ರಸ್ತಾವನೆಗಳನ್ನು ಪರಿಶೀಲಿಸಿಲು ಒಪ್ಪಿರುತ್ತಾರೆಂದು ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ, ಎಲ್ಲರಿಗೂ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಜಿಲ್ಲಾಧಿಕಾರಿಗಳು ಮತ್ತು ವಿಶೇಷಾಧಿಕಾರಿಗಳು
ಜವಹರ್‌ಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ ಯೋಜನೆಯ
ಮೈಸೂರು.

ಪ್ರತಿಯನ್ನು ಕೆಳಕಂಡವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ :

1. ಮಾನ್ಯ ಮುಖ್ಯ ಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಹಾಗೂ ವಿದಾನಸಭೆಯ ಸದಸ್ಯರು, ಕೃಷ್ಣರಾಜ ಕ್ಷೇತ್ರ, ಮೈಸೂರು.
2. ಮಾನ್ಯ ಲೋಕಸಭಾ ಸದಸ್ಯರು, ಮೈಸೂರು ಕ್ಷೇತ್ರ, ಮೈಸೂರು.
3. ಮಾನ್ಯ ವಿಧಾನಸಭಾ ಸದಸ್ಯರು, ಚಾಮರಾಜ ಕ್ಷೇತ್ರ, ಮೈಸೂರು.
4. ಮಾನ್ಯ ವಿಧಾನಸಭಾ ಸದಸ್ಯರು, ನರಸಿಂಹರಾಜ ಕ್ಷೇತ್ರ, ಮೈಸೂರು.
5. ಮಾನ್ಯ, ವಿಧಾನಸಭಾ ಸದಸ್ಯರು, ಚಾಮುಂಡೇಶ್ವರಿ ಕ್ಷೇತ್ರ, ಮೈಸೂರು.
6. ಶ್ರೀ ಡಿ. ಪದ್ಮನಾಭ, ಅಧ್ಯಕ್ಷರು, ಛೇರ್‌ಮೆನ್, ಜಿಲ್ಲಾ ಪ್ಲಾನಿಂಗ್ ಕಮಿಟಿ, ಮೈಸೂರು.
7. ಶ್ರೀ ಹೆಚ್.ಎನ್.ಶ್ರೀಕಂಠಯ್ಯ, ಜಿಲ್ಲಾ ಪ್ಲಾನಿಂಗ್ ಕಮಿಟಿ ಮೆಂಬರ್, ನಗರಪಾಲಿಕೆ ಸದಸ್ಯರು, ಮೈಸೂರು.
8. ಶ್ರೀ ಬಿ.ಎಲ್.ಭೈರಪ್ಪ, ಜಿಲ್ಲಾ ಪ್ಲಾನಿಂಗ್ ಕಮಿಟಿ ಮೆಂಬರ್, ನಗರಪಾಲಿಕೆ ಸದಸ್ಯರು, ಮೈಸೂರು.
9. ಶ್ರೀ ಎಂ.ಜಯಶಂಕರಸ್ವಾಮಿ, ಜಿಲ್ಲಾ ಪ್ಲಾನಿಂಗ್ ಕಮಿಟಿ ಮೆಂಬರ್, ಮೈಸೂರು.
10. ಮಾನ್ಯ ಮಹಾಪೌರರು, ಮೈಸೂರು ನಗರಪಾಲಿಕೆ, ಮೈಸೂರು.
11. ಮಾನ್ಯ ಉಪ ಮಹಾ ಪೌರರು, ಮೈಸೂರು ನಗರಪಾಲಿಕೆ, ಮೈಸೂರು.
12. ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ 4ನೇ ಮಹಡಿ, ವಿಕಾಸಸೌಧ, ಬೆಂಗಳೂರು.
13. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, 4ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.
14. ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು.
15. ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ. ಸಿಲ್ವರ್ ಜ್ಯುಬಲಿ ಬ್ಲಾಕ್, 2ನೇ ಮಹಡಿ, Unity ಕಟ್ಟಡ, 3ನೇ ಅಡ್ಡರಸ್ತೆ, ಮಿಷನ್ ರಸ್ತೆ, ಬೆಂಗಳೂರು.
16. ವ್ಯವಸ್ಥಾಪಕ ನಿರ್ದೇಶಕರು, ಕೆ,ಯು,ಡಬ್ಲ್ಯೂ.ಎಸ್, ಮತ್ತು ಡಿ.ಬಿ., ನಂ. 6, ಜಲಭವನ, 1ನೇ ಹಂತ, 1ನೇ ಸ್ಟೇಜ್, ಬಿ.ಟಿ.ಎಂ. ಬಡಾವಣೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು 560029.
17. ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ರ.ಸಾ.ನಿ., ಕೆಂಗಲ್ ಹನುಮಂತಯ್ಯ ಜೋಡಿ ರಸ್ತೆ, ಶಾಂತಿನಗರ, ಬೆಂಗಳೂರು.
18. ಆಯುಕ್ತರು, ಪಾರಾಂಪರಿಕ ಇಲಾಖೆ, ಅರ್ಕ್ಯಾಲಜಿ ಮ್ಯೂಸಿಯಂ ಮತ್ತು ಪಾರಂಪರಿಕ, ವೆಂಕಟಪ್ಪ ಆರ್ಟ್ ಗ್ಯಾಲರಿ, ಕಸ್ತೂರ್ಬಾ ರಸ್ತೆ, ಬೆಂಗಳೂರು.19.
19. ಆಯುಕ್ತರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ,ಬೆಂಗಳೂರು – 1.

**II.** <u>ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.</u>

1. ಆಯುಕ್ತರು, ಮೈಸೂರು ನಗರಪಾಲಿಕೆ, ಮೈಸೂರು.
2. ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
3. ಆಯುಕ್ತರು, ಕೊಳಚೆ ನಿರ್ಮೂಲನ ಮಂಡಳಿ, ಶೇಷಾದ್ರಿಪುರಂ, ಬೆಂಗಳೂರು.
4. ಉಪ ವಿಭಾಗಾಧಿಕಾರಿಗಳು, ಮೈಸೂರು.
5. ಅಧೀಕ್ಷಕ ಇಂಜಿನಿಯರ್, ಮೈಸೂರು ನಗರಪಾಲಿಕೆ, ಮೈಸೂರು.
6. ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿ., ಮೈಸೂರು.
7. ಕಾರ್ಯಪಾಲಕ ಇಂಜಿನಿಯರ್, ಕೆ,ಯು,ಡಬ್ಲ್ಯೂ.ಎಸ್, ಮತ್ತು ಡಿ.ಬಿ., ನಗರವಿಭಾಗ (ಜೆಎನ್ ನರ್ಮ್) ಯಾದವಗಿರಿ, ಮೈಸೂರು.
8. ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಮೈಸೂರು.
9. ಕಾರ್ಯಪಾಲಕ ಇಂಜಿನಿಯರ್, ಕ.ರಾ.ರ.ಸಾ.ನಿ.,, ಮೈಸೂರು ಗ್ರಾಮಾಂತರ ವಿಭಾಗ, ಬನ್ನಿಮಂಟಪ, ಮೈಸೂರು.
10. ಉಪ ನಿರ್ದೇಶಕರು, ಪಾರಂಪರಿಕ ಇಲಾಖೆ, ಮೈಸೂರು.
11. ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಮೈಸೂರು.

ಜಿಲ್ಲಾಧಿಕಾರಿಗಳು ಮತ್ತು ವಿಶೇಷಾಧಿಕಾರಿಗಳು
ಜವಹರ್‌ಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ ಯೋಜನೆಯ
ಮೈಸೂರು.